# ಬೆಸಗರಹಳ್ಳಿ ರಾಮಣ್ಣರವರ ಪ್ರೇಮ ಕಥೆಗಳು: ಮರು ಚಿಂತನೆ

**ಶಿವರಾಜು ಎನ್.**
ಸಂಶೋಧನಾರ್ಥಿ
ಕುವೆಂಪು ಕನ್ನಡ ಅಧ್ಯಯನ ಕೇಂದ್ರ
ಕುಪ್ಪಳಿ, ತೀರ್ಥಹಳ್ಳಿ, ಶಿವಮೊಗ್ಗ.

Article Link: https://aksharasurya.com/2024/01/shivaraju-n-9/

## ABSTRACT:

ಕಥೆಯನ್ನು ಬರೆಯುವ ಕಥೆಗಾರನಿಗೆ ಕಥಾ ವಸ್ತುವಿನ ಆಯ್ಕೆಯಲ್ಲಿ ಸಾಕಷ್ಟು ಸಮಸ್ಯೆಗಳಿರುತ್ತವೆ. ಸತ್ಯ ಘಟನೆಗಳನ್ನು ಅನುಲಕ್ಷಿಸಿ ಕಥೆಗಳನ್ನು ಬರೆಯುವ ಸಂದರ್ಭದಲ್ಲಿ ಹಲವಾರು ಸಮಸ್ಯೆಗಳು ಎದುರಾಗುತ್ತವೆ. ಕೆಲವು ಸಂದರ್ಭಗಳಲ್ಲಿ ಕಾಲ್ಪನಿಕ ಕಥೆಗಳು ಸತ್ಯ ಘಟನೆಗಳಿಗೆ ಹೋಲಿಕೆಯಾಗುತ್ತವೆ. ಕನ್ನಡ ಸಾಹಿತ್ಯದಲ್ಲಿ ಹಲವಾರು ಪ್ರೇಮ ಸಂಬಂಧಿ ಕಥೆಗಳು ಪ್ರಕಟವಾಗಿದೆ. ಪ್ರೇಮ ಸಂಬಂಧೀ ಕಥೆಗಳನ್ನು ಬರೆದವರ ಸಾಲಿನಲ್ಲಿ ಡಾ. ಬೆಸಗರಹಳ್ಳಿ ರಾಮಣ್ಣನವರು ಸಹ ಪ್ರಮುಖರು. ಅವರ ಪ್ರೇಮ ಕಥೆಗಳ ಸ್ವರೂಪವನ್ನು ಅಧ್ಯಯನ ಮಾಡುವುದು ಪ್ರಸ್ತುತ ಲೇಖನ ರಚನೆಯ ಹಿಂದಿನ ಉದ್ದೇಶ.

ಗ್ರಾಮಾಂತರ ಪ್ರದೇಶದ ಜನರ ಜೀವನವನ್ನು ಕುರಿತು ಹೊಸ ರೀತಿಯಲ್ಲಿ ಬರೆಯತೊಡಗಿದ ಕಥೆಗಾರರಲ್ಲಿ ಬೆಸಗರಹಳ್ಳಿ ರಾಮಣ್ಣ ಮೊದಲಿಗರಾಗುತ್ತಾರೆ. ಅವರು ಕಥೆಗಳನ್ನು ರಚಿಸುವ ಕಾಲದವರೆಗೂ ಹಳ್ಳೀಗಾಡಿನ ಜೀವನವನ್ನು ಕು ರಿತು ಯಾರೂ ಬರೆದಿಲ್ಲವೆಂದು ಇದರ ಅರ್ಥವಲ್ಲ. ಬೆಸಗರಹಳ್ಳಿ ರಾಮಣ್ಣ ಅವರು ಪ್ರೇಮ ಸಂಬಂಧೀ ಕಥೆಗಳನ್ನು ಬರೆಯುವುದರಲ್ಲಿ ಸಿದ್ದ ಹಸ್ತರೆಂಬುದಕ್ಕೆ ಅವರ ಅನೇಕ ಕಥೆಗಳಲ್ಲಿ ನಿದರ್ಶನ ದೊರಕುತ್ತವೆ. ಅವರು ಬರೆದ ಅಪರೂಪದ ಪ್ರೇಮ ಕಥೆಗಳಲ್ಲಿ "ಶೂಲ" ಮುಖ್ಯವಾದದ್ದು. ಗ್ರಾಮೀಣ ಭಾಗದ ಪ್ರೇಮಿಗಳ ದುರಂತ ಅಂತ್ಯಕ್ಕೆ ಜಾತಿ ಕಾರಣವಾಗಿರದೇ ಅಂತಸ್ತು, ಕುಲ ಕಾರಣವಾಗಿರುವುದು ಈ ಕಥೆಯ ವಿಶೇಷತೆ. 'ಗರ್ಜನೆ' ಅವರ ವಿಶಿಷ್ಟ ಪ್ರೇಮ ಕಥೆ. ಈ ಕಥೆಯ ನಾಯಕನ ಪ್ರೀತಿಗೆ ಜಾತಿ, ಪ್ರೀತಿ, ಅಂತಸ್ತು ಎಲ್ಲ ಅಡ್ಡಿಯಾಗಿವೆ. 'ಬೇಲಾ' ಕತೆಯನ್ನು ಎಪ್ಪತ್ತರ ದಶಕದಲ್ಲಿ ಬಿಹಾರ ರಾಜ್ಯದಲ್ಲಿ ಸಿಡುಬು ರೋಗ ನಿರ್ಮೂಲನಕ್ಕಾಗಿ ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯಕ್ರಮದಲ್ಲಿ ಭಾಗವಹಿಸಲು ಹೋಗಿದ್ದಾಗ ದೊರೆತ ಅನುಭವದಿಂದ ಬರೆದಿದ್ದು ಎಂದು ಕಥಾ ಸಂಕಲನದ ಮುನ್ನುಡಿಯಲ್ಲಿ ಹೇಳಿದ್ದಾರೆ.

## KEY WORDS:

ಪ್ರೀತಿ, ಸೌಂದರ್ಯ, ಅಂತಸ್ತು, ಜಾತಿ, ಕುಲ, ಸಮಸ್ಯೆ, ಆತಂಕ, ಜನ್ಮದಾತ.

ಬೆಸಗರಹಳ್ಳಿ ರಾಮಣ್ಣ ನವ್ಯೋತ್ತರ ಕನ್ನಡ ಕಥೆಗಾರರಲ್ಲಿ ಮುಖ್ಯರಾದವರು. ಬಂಡಾಯ ಸಾಹಿತ್ಯ ಚಳುವಳಿಯೊಂದಿಗೆ ನೇರವಾಗಿ ತಮ್ಮನ್ನು ಗುರುತಿಸಿಕೊಂಡವರು. ಜನಪ್ರಿಯ ಕಥೆಗಳ ಮೂಲಕ ಕನ್ನಡ ವಾಚಕರಿಗೆ ಪರಿಚಿತರಾದವರು. ಬೆಸಗರಹಳ್ಳಿ ರಾಮಣ್ಣ ಅವರು ತಮ್ಮ ಜೀವಿತಾವಧಿಯಲ್ಲಿ 48 ಕತೆಗಳನ್ನು ರಚಿಸಿದ್ದಾರೆ. ಅವರ ಕಥೆಗಳು ಹಲವಾರು ವಿಶ್ವವಿದ್ಯಾಲಯಗಳಲ್ಲಿ ಪಠ್ಯಕ್ರಮಗಳಾಗಿವೆ. ಹಲವಾರು ಭಾಷೆಗಳಿಗೆ ಅವರ ಕತೆಗಳು ಅನುವಾದಗೊಂಡಿವೆ. ಬೆಸಗರಹಳ್ಳಿ ರಾಮಣ್ಣ ಅವರು ವೃತ್ತಿಯಿಂದ ವೈದ್ಯರಾಗಿದ್ದು, ಪ್ರವೃತ್ತಿಯಿಂದ ಕಥೆಗಾರರಾಗಿ ಕನ್ನಡ ಸಾಹಿತ್ಯಕ್ಕೆ ಬಹುಮುಖ್ಯ ಕತೆಗಳನ್ನು ಸೇರ್ಪಡೆಗೊಳಿಸಿದ್ದಾರೆ. ಮಂಡ್ಯ, ಮದ್ದೂರು, ಬೆಸಗರಹಳ್ಳಿ ಪರಿಸರದ ವಿಶಿಷ್ಟ ಭಾಷೆ ಹಾಗೂ ಅನುಭವಗಳ ಮೂಲಕ ತಮ್ಮ ಕಥೆಗಳನ್ನು ರಚಿಸಿದ್ದಾರೆ. ಸಾಮಾನ್ಯ ಜನತೆಯ ದೈನಂದಿನ ಬದುಕಿನ ಚಿತ್ರಣವನ್ನು ಇವರ ಕಥೆಗಳಲ್ಲಿ ಕಾಣಬಹುದು.

ಬೆಸಗರಹಳ್ಳಿ ರಾಮಣ್ಣ ಅವರನ್ನು ಒಂದು ನಿರ್ದಿಷ್ಟ ಪಂಥದ ಕತೆಗಾರರಾಗಿ ಗುರುತಿಸುವುದು ಕಷ್ಟಕರವಾದ ವಿಷಯ. ಅವರ ಕಥೆಗಳಲ್ಲಿ ವ್ಯಕ್ತಿ ಮತ್ತು ವ್ಯವಸ್ಥೆಯ ವಿರುದ್ಧದ ಹೋರಾಟದ ಚಿತ್ರಣವನ್ನು ಕಾಣಬಹುದು. ಪ್ರವೃತ್ತಿಯಿಂದ ಸಾಹಿತಿಯಾಗುವುದು ಕಷ್ಟಸಾಧ್ಯವಾದ ವಿಷಯ. ಏಕೆಂದರೆ ವೃತ್ತಿಯಿಂದ ಸಾಹಿತಿಗಳಾಗಿರುವ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರ ಪೈಪೋಟಿಯನ್ನು ಎದು ರಿಸಬೇಕಾಗುತ್ತದೆ.

ಯಾವುದೇ ಒಬ್ಬ ವ್ಯಕ್ತಿ ಒಂದು ನಿರ್ದಿಷ್ಟ ಕ್ಷೇತ್ರದಲ್ಲಿ ಸಾಧನೆ ಮಾಡಬೇಕಾದರೆ ಆ ವ್ಯಕ್ತಿ ಆ ಕ್ಷೇತ್ರ ಪ್ರವೇಶಿಸಿದ ಸಮಯ ಹಾಗೂ ಆ ಕ್ಷೇತ್ರದಲ್ಲಿನ ಸಮಸ್ಯೆಗಳು ಸಾಧಕ–ಬಾಧಕಗಳು, ಪರಿಸರ ಇತ್ಯಾದಿ ವಿಷಯಗಳು ಬಹಳ ಮುಖ್ಯವಾಗುತ್ತವೆ. ಬೆಸಗರಹಳ್ಳಿ ರಾಮಣ್ಣ ಅವರು ಕನ್ನಡ ಕಥಾ ಲೋಕವನ್ನು ಪ್ರವೇಶ ಮಾಡಿದ ಸಂದರ್ಭದಲ್ಲಿ ತುಂಬಾ ಸಮಸ್ಯೆಗಳಿದ್ದವು.

“ಬೆಸಗರಹಳ್ಳಿ ರಾಮಣ್ಣ ನವೋದಯ, ನವ್ಯ, ನವ್ಯೋತ್ತರ ಮಾರ್ಗಗಳ ಎಲ್ಲಾ ಉತ್ತಮ ಅಂಶಗಳನ್ನು ಮೈಗೂಡಿಸಿಕೊಂಡು, ಗ್ರಾಮೀಣ ಜಗತ್ತಿನ ಜನಪದರಿಂದ ಪ್ರೇರಣೆ ಪಡೆದು ಕಥೆಗಳನ್ನು ಬರೆದ ಪ್ರಮುಖರ ಸಾಲಿನಲ್ಲಿ ಒಬ್ಬರು. ಅವರ ಪ್ರತಿಭೆ ದೇಶೀಮೂಲವಾದದ್ದು”[1] ಬೆಸಗರಹಳ್ಳಿ ಅವರ ಕತೆಗಳಲ್ಲಿ ವ್ಯಕ್ತಿ ಮತ್ತು ವ್ಯವಸ್ಥೆಯ ವಿರುದ್ಧದ ಹೋರಾಟದ ಚಿತ್ರಣವನ್ನು ಕಾಣಬಹುದು. ಗ್ರಾಮಾಂತರ ಪ್ರದೇಶದ ಜನರ ಜೀವನವನ್ನು ಕು ರಿತು ಹೊಸ ರೀತಿಯಲ್ಲಿ ಬರೆಯತೊಡಗಿದ ಕತೆಗಾರರ ಪೈಕಿ ರಾಮಣ್ಣ ಅವರು ಮೊದಲಿಗರಾಗುತ್ತಾರೆ. ಅವರು ಕತೆಗಳನ್ನು ರಚಿಸುವ

ಕಾಲದವರೆಗೆ ಹಳ್ಳಿಗಾಡಿನ ಜೀವನವನ್ನು ಕುರಿತು ಯಾರೂ ಬರೆದಿಲ್ಲವೆಂದು ಇದರ ಅರ್ಥವಲ್ಲ. "ಅವರ ಕತೆ ಬರೆಯಲು ಆರಂಭಿಸುವ ಹೊತ್ತಿಗೆ ನವ್ಯಕಥಾ ಸಾಹಿತ್ಯ ಪ್ರಾರಂಭವಾಗಿ ತ್ತು. ನವೋದಯ, ಪ್ರಗತಿಶೀಲ ಸಾಹಿತ್ಯಗಳು ದಣಿದಿದ್ದವು. ನವ್ಯಕಥಾ ಸಾಹಿತ್ಯ ಹೊಸ ಅನ್ವೇಷಣೆಯಲ್ಲಿ ತೊಡಗಿತ್ತು. ಇಂತಹ ಸಂದರ್ಭದಲ್ಲಿ ರಾಮಣ್ಣನವರು ಆಯ್ಕೆ ಮಾಡಿಕೊಂಡಿದ್ದು ಗ್ರಾಮೀಣ ಪರಿಸರವನ್ನು. ಇದು ಅವರ ಹೆಚ್ಚುಗಾರಿಕೆ."[2] ಅವರು ಕತೆಗಳನ್ನು ಬರೆಯಲು ಪ್ರಾರಂಭಿಸಿದ ಅವಧಿಯಲ್ಲಿ ಕನ್ನಡ ಸಹೃದಯರು ಕಾದಂಬರಿ, ನಾಟಕ, ಹಾಸ್ಯ ಸಾಹಿತ್ಯದತ್ತ ಒಲವನ್ನು ತೋರಿದರು. ಇಂತಹ ವಿಷಮ ಪರಿಸ್ಥಿತಿಯಲ್ಲಿ ಅವರು ಕಥೆಗಳನ್ನು ಬರೆದು ಯಶಸ್ವಿಯಾದರು.

ಬೆಸಗರಹಳ್ಳಿ ರಾಮಣ್ಣ ಅವರು ಪ್ರೇಮ ಸಂಬಂಧೀ ಕಥೆಗಳನ್ನು ಬರೆಯುವುದರಲ್ಲಿ ಸಿದ್ಧಹಸ್ತರೆಂಬುದಕ್ಕೆ ಅವರ ಅನೇಕ ಕಥೆಗಳಲ್ಲಿ ನಿದರ್ಶನಗಳು ದೊರಕುತ್ತವೆ. ಅವರು ಬರೆದ 48 ಕಥೆಗಳ ಪೈಕಿ 03 ಕಥೆಗಳು ಪ್ರೇಮ ಸಂಬಂಧಿ ಕಥೆಗಳಾಗಿವೆ. ಆ ಕಥೆಗಳೆಂದರೆ, 'ಗರ್ಜನೆ' 'ಶೂಲ' ಹಾಗೂ 'ಬೇಲ'. ಅವರು ಬರೆದ ಅಪರೂಪದ ಪ್ರೇಮ ಕಥೆಗಳಲ್ಲಿ ಗರ್ಜನೆ ಮುಖ್ಯವಾದದ್ದು. ಗರ್ಜನೆ ಅನಾಥನೊಬ್ಬನ ಬಾಳಿನ ಗೋಳಿನ ಕಥೆಯನ್ನು ಕುರಿತು ಹೇಳುತ್ತದೆ. ಗರ್ಜನೆ ಅವರಿಗೆ ಮನ್ನಣೆ, ಗೌರವ, ಪ್ರಶಸ್ತಿಗಳನ್ನು ತಂದು ಕೊಟ್ಟ ಕಥೆ. ಗರ್ಜನೆ ಕಥಾ ರಚನೆಯ ವಿಚಾರಗಳನ್ನು ಸಂಕಲನದ ಮುನ್ನುಡಿಯಲ್ಲಿ ಹೀಗೆ ವಿವರಿಸಿದ್ದಾರೆ. "ಗರ್ಜನೆ ನನ್ನ ಎರಡನೇ ಕಥಾ ಸಂಕಲನ. ಈ ಸಂಕಲನಕ್ಕೆ ಹೆಸರಿಟ್ಟ ಕಥೆಯಾ ದ ಗರ್ಜನೆ ನನ್ನ ಮನಸ್ಸಿಗೆ ತೃಪ್ತಿ ತಂದುಕೊಟ್ಟ ಕಥೆಗಳಲ್ಲೊಂದು. 1960–75ರ ನಡುವೆ ಹುಟ್ಟಿದ ಕನ್ನಡ ಸಾಹಿತ್ಯದ ಉತ್ತಮ ಕಥೆಗಳಲ್ಲೊಂದು. ಶ್ರೀ ಬಿ. ವಿ. ವೈಕುಂಠರಾಜು ಪ್ರಕಟಿಸಿದ 'ಹದಿನೈದು ಕಥೆಗಳು' ಎಂಬ ಸಂಕಲನದಲ್ಲಿ ಪ್ರಕಟವಾಗಿ ತ್ತು. ಈ ಪುಸ್ತಕದ ಪ್ರಕಾಶಕರು ಪೂಜ್ಯ ಮಾಸ್ತಿಯವರು. ಕನ್ನಡ ಕಥಾ ಸಾಹಿತ್ಯದ ಅಗ್ರಗಣ್ಯರಲ್ಲಿ ಹಾಗೂ ಮೂಲಪುರುಷರಲ್ಲಿ ಪ್ರಮುಖರಾದ ಮಾಸ್ತಿಯವರು ಈ ಕಥಾ ಸಂಕಲನ ಹೊರಬರಲು ಕಾರಣ ಪುರುಷರಾದದ್ದು. ಗರ್ಜನೆ 1972 ರಲ್ಲಿ ಪ್ರಕಟವಾದ ಒಳ್ಳೆಯ ಕಥಾ ಸಂಗ್ರಹವೆಂದು ಕನ್ನಡ ಸಾಹಿತ್ಯ ಅಕಾಡೆಮಿಯಿಂದ ಪ್ರಥಮ ಬಹುಮಾನ ಪಡೆದಿದೆ."[3] ಈ ಕಥೆಯ ಮುಖ್ಯ ಪಾತ್ರಧಾರಿ ಹಾಗೂ ಕಥಾ ನಾಯಕನಾದ ಮರಿನಂಜ ಉ. ಕುರಿನಂಜನದು ಏಕಮುಖ ಪ್ರೀತಿ ಅಥವಾ one side love ಮರಿನಂಜ ಅದೇ ಗ್ರಾಮದ ನಿಂಗಣ್ಣನ ಮಗಳು ಪಾರ್ವತಿಯನ್ನು ಮನಸಾರೆ ಪ್ರೀತಿಸುತ್ತಾನೆ. ಪಾರ್ವತಿಯ ಸೌಂದರ್ಯವನ್ನು ನಿರೂಪಕರು ಹೀಗೆ ಚಿತ್ರಿಸುತ್ತಾರೆ. "ತಿದ್ದಿ ಗಟ್ಟಿಸಿದಂತಹ ಮೈಕಟ್ಟು. ತಲೆಯ ಮೇಲೊಂದು, ಸೊಂಟದ ಮೇಲೊಂದು ನೀರು ತುಂಬಿದ ಕೊಡಗಳು. ಹಣೆಯ ಮೇಲೆ ಬೆವರಿನ ಹನಿಗಳ

ಸಾಲು. ಎಣ್ಣೆಗೆಂಪು ಬಣ್ಣದ ದುಂಡು ಮುಖಕ್ಕೆ ಒಪ್ಪುವಂತಹ ಮೂಗು, ತುಟಿಗಳು. ನೋಡುತ್ತ ನಿಂತ ಮರಿನಂಜನ ಎದೆಗೆ ಹದವಾದ ನೆಲಕ್ಕೆ ನೇಗಿಲು ಹೂಡಿದಾಗ ಅಗುವಷ್ಟು ಹರ್ಷವಾಯಿತು."[4]

ಮರಿನಂಜನ ಪ್ರೀತಿ ಯಶಸ್ವಿಯಾಗದಿರಲು ಹಲವಾರು ಅಡ್ಡಿ ಆತಂಕಗಳು ಎದುರಾಗುತ್ತವೆ. ಎಲ್ಲಾ ಸಮಸ್ಯೆಗಳು ಆತನನ್ನು ಹಿಂಡಿ ಹಿಪ್ಪೆ ಮಾಡುತ್ತವೆ. ಅಂತಿಮವಾಗಿ ಮರಿನಂಜನ ಪ್ರೀತಿ ಮರಿನಂಜನೊಂದಿಗೆ ಸಾಯುತ್ತದೆ. ಮ ರಿನಂಜ ಪಾರ್ವತಿಯನ್ನು ಮುಖಾ-ಮುಖಿ ಭೇಟಿಯಾಗುವುದೇ ಇಲ್ಲ. ಮ ರಿನಂಜ ಜನಿಸುವುದಕ್ಕೂ ಪೂರ್ವದಲ್ಲಿಯೇ ಇದ್ದ ಆಸ್ತಿ ಗೌಡರ ಪಾಲಾಗಿರುತ್ತದೆ. ಅಲ್ಲದೆ ಅವನ ತಂದೆ ಸತ್ತ ನಾಲ್ಕು ವರ್ಷಗಳ ನಂತರ ಹುಟ್ಟಿದವನು ಬೇರೆ. ಈ ಕಾರಣದಿಂದಾಗಿ ನೆರೆಹೊರೆಯವರು ಅವನನ್ನು ಗೌಡರಿಗೆ ಹುಟ್ಟಿರುವನೆಂದು ಜರಿಯುತ್ತಾರೆ. ಇದರಲ್ಲಿ ಸತ್ಯ ಇಲ್ಲದಿಲ್ಲ. ಒಂದು ಅರ್ಥದಲ್ಲಿ ಅವನು ಗೌಡರ ಮಗನೆಂಬುದೆಷ್ಟು ನಿಜವೋ ವಾಸ್ತವವಾಗಿ ಅವನು ಅದೇ ಗೌಡರ ಮನೆಯ ಜೀತದಾಳೆಂಬುದು ಅಷ್ಟೇ ನಿಜ. ಅವನಿಗೆ ಸ್ವಂತ ಅಸ್ತಿತ್ವವೆಂಬುದೇ ಇಲ್ಲ. ಗೌಡರು ಮರಿನಂಜನನ್ನು ತಮ್ಮ ಮಗನೆಂದು ಒಪ್ಪಿಕೊಂಡಿದ್ದರೆ ಆತನ ಪ್ರೀತಿ ಯಶಸ್ವಿಯಾಗುತ್ತಿತ್ತು. ಆದರೆ ಗೌಡರು ತಮ್ಮ ಗೌರವ ಹಾಳಾಗುತ್ತದೆ ಎಂಬ ಕಾರಣದಿಂದ ಮರಿನಂಜನನ್ನು ಜೀತದಾಳುವಾಗಿಯೇ ನಡೆಸಿಕೊಳ್ಳುತ್ತಾರೆ. ಪಾರ್ವತಿ ಮೈ ನೆರೆದ ದಿನ ಗುಡ್ಲು ಶಾಸ್ತ್ರದಲ್ಲಿ ಆಕೆಯನ್ನು ಅಲಂಕಾರದಲ್ಲಿ ನೋಡಿದ ಮ ರಿನಂಜ ಮಾನಸಿಕವಾಗಿ ಎಲ್ಲೋ ಕಳೆದು ಹೋಗುತ್ತಾನೆ. ಪಾರ್ವತಿಯ ಗುಡ್ಲು ಶಾಸ್ತ್ರದ ದಿನ ಗಿರಿಯಕ್ಕ ತಮಾಷೆಗೆಂದು ಆಡಿದ ಒಂದು ಮಾತು. ಅದೆಂದರೆ "ನಿಂಗಣ್ಣನ ಮಗಳು ಪಾರ್ವತಿ ಮೈ ನೆರೆದವಳೆ, ಗುಡ್ಲು ಕೂಡುತಾ ಅವ್ರೆ, ಮದುವೆ ಆದೀಯಾ? ಗಂಡಸುತನ ಇದ್ದಾದ ನಿಂಗೆ? ಥೂ ಎಂದು ಬೀದಿಯಲ್ಲೇ ಎಲ್ಲ ರಿಗೂ ಕಾಣುವಂತೆ ಕೆನ್ನೆಗ ತಿವಿದಳು."[5] ಗಿರಿಯಕ್ಕನ ಮಾತಿನಿಂದ ಮರಿಜಂಜ ಮಾನಸಿಕವಾಗಿ ಜರ್ಜರಿತನಾಗುತ್ತಾನೆ. ಈ ಕಥೆಯನ್ನು ಕನ್ನಡದ ಅತ್ಯುತ್ತಮ ಪ್ರೇಮ ಕಥೆಗಳೆಂದು ಪರಿಗಣಿಸಲು ಮುಖ್ಯ ಕಾರಣ ಏನೆಂದರೆ ಪಾರ್ವತಿಯನ್ನು ಆಕೆಯ ಸೌಂದರ್ಯ ನೋಡಿ ಪ್ರೀತಿಸಿದರೂ, ಆಕೆಗೆ ಮೋಸ ಮಾಡುವ ಉದ್ದೇಶವಿಲ್ಲ. ಆತನ ಪ್ರೀತಿ ವಿಫಲವಾಗಲು ಆತನ ದಡ್ಡತನ ಕಾರಣವಾಗಿರುವುದರ ಜೊತೆಗೆ, ಆತನ ಜನ್ಮದಾತನ ಹೇಡಿತನವೂ ಕಾರಣವಾಗಿವೆ.

'ಗರ್ಜನೆ' ಕಥೆಯ ಆಧಾರದ ಮೇಲೆ ಟಿ. ಎಸ್. ನಾಗಾಭರಣ ಅವರು ಡಾ. ಶಿವರಾಜ್ ಕುಮಾರ್ ಅಭಿನಯದ 'ಜನುಮದಾತ' ಕಥೆಗೆ ಚಿತ್ರಕಥೆಯನ್ನು ಹೆಣೆದಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಏಕೆಂದರೆ ಈ ಸಿನಿಮಾದಲ್ಲಿಯೂ

ಅನೈತಿಕ ಸಂಬಂಧಕ್ಕೆ ಜನಿಸಿದ ಕಥಾ ನಾಯಕ ಕೊನೆಯವರೆಗೂ ತನ್ನ ತಂದೆಯನ್ನು ತಂದೆಯೆಂದು ಒಪ್ಪಿಕೊಳ್ಳುವುದಿಲ್ಲ.

ಶೂಲ ಕಥೆಯ ಬಗ್ಗೆ ಮುನ್ನುಡಿಯಲ್ಲಿ ಲೇಖಕರು ಹೀಗೆ ಹೇಳಿದ್ದಾರೆ: "ಶೂಲ ಕಥೆ ಮಂಡ್ಯ ಜಿಲ್ಲೆಯ ಅರಕೆರೆ ಗ್ರಾಮದಲ್ಲಿ ನಡೆಯುವ ವಿಶಿಷ್ಟ ಹಬ್ಬವೊಂದರ ಹಿನ್ನೆಲೆಯಲ್ಲಿ ರಚಿತವಾದ ದುರಂತ ಪ್ರೇಮ ಕಥೆ. ಅಪರೂಪಕ್ಕೊಮ್ಮೆ ನಡೆಯುವ ಈ ಹಬ್ಬವನ್ನು ಡಾ. ಎಂ. ಚಿದಾನಂದಮೂರ್ತಿ ಹಾಗೂ ನನ್ನ ಅನೇಕ ಸ್ನೇಹಿತರೊಡನೆ ನೋಡುವ ಅದೃಷ್ಟ ನನಗೆ 1976ರಲ್ಲಿ ಲಭಿಸಿತು."[6] ಈ ಕಥೆಯ ಪ್ರೇಮಿಗಳಾದ ಗೌರಿ ಮತ್ತು ಜಯರಾಮು ಒಂದೇ ಊರಿನವರು, ಒಂದೇ ಜಾತಿಯವರು. ಇವರ ಪ್ರೀತಿ ಮುರಿದು ಬೀಳಲು ಜಾತಿ ಕಾರಣವಾಗದೇ ಅಂತಸ್ತು ಕುಲ ಕಾರಣವಾಗಿರುತ್ತದೆ. ಬಿ.ಎಸ್ಸಿ. ಪದವೀಧರನಾದ ಜಯರಾಮು ಊರಿಗೆ ಪ್ರಗತಿಪರ ರೈತನಾಗಿರುತ್ತಾನೆ. ಗೌರಿಯ ಅಣ್ಣ ಪುಟ್ಟಸ್ವಾಮಿ ಜಯರಾಮುವಿಗೆ ಸರ್ಕಾರಿ ನೌಕರಿ ದೊರೆತಿಲ್ಲ ಎಂಬ ಕಾರಣದಿಂದ ಅವನ ವಿವಾಹಕ್ಕೆ ಒಪ್ಪುವುದಿಲ್ಲ. ಗೌರಿಯ ವಿವಾಹವನ್ನು ಅದೇ ಗ್ರಾಮದ ನಾಡಗೌಡರ ಮಗನಾದ ಶಂಕರನೊಂದಿಗೆ ನಿಶ್ಚಯ ಮಾಡುತ್ತಾನೆ. ಜಯರಾಮು ಗೌರಿಯರ ವಿವಾಹದ ವಿಚಾರದಲ್ಲಿ ಊರಿನಲ್ಲಿ ದೊಡ್ಡ ಗಲಾಟೆಯಾಗಿ ಶೂಲ ಆಟದಲ್ಲಿ ಜಯರಾಮು ಗೆದ್ದರೆ ಗೌರಿಯ ಜೊತೆ ವಿವಾಹ ಮಾಡಿಸುವುದಾಗಿ ಊರಿನ ಯಜಮಾನರು ತೀರ್ಮಾನಿಸುತ್ತಾರೆ. ಊರಿನ ಯಜಮಾನರ ತೀರ್ಮಾನಕ್ಕೆ ಪುಟ್ಟಸ್ವಾಮಿಯೂ ಒಪ್ಪುತ್ತಾನೆ. ವಿಶೇಷವೆಂದರೆ ಶೂಲ ಆಟದಲ್ಲಿ ಜಯರಾಮುವಿಗೆ ಪುಟ್ಟಸ್ವಾಮಿಯೇ ಪ್ರತಿಸ್ಪರ್ಧಿ. ಆಟದಲ್ಲಿ ಮರದಿಂದ ಬಿದ್ದು ಸಾಯುತ್ತಿದ್ದ ಪುಟ್ಟಸ್ವಾಮಿಯನ್ನು ಜಯರಾಮು ಕಾಪಾಡುತ್ತಾನೆ. ಅಂತಿಮವಾಗಿ ಜಯರಾಮು ಸಾಯುತ್ತಾನೆ. ಜಯರಾಮುವನ್ನು ಮರೆಯಲಾಗದ ಗೌರಿಯು ಪ್ರಾಣ ತ್ಯಾಗ ಮಾಡುತ್ತಾಳೆ.

ಕಥೆಯ ಅಂತಿಮ ಭಾಗ ಹೃದಯ ವಿದ್ರಾವಕವಾಗಿದೆ. "ಈ ಅನಿರೀಕ್ಷಿತ ದುರಂತವನ್ನು ನೋಡುತ್ತಿದ್ದವರನ್ನು ನೂಕಿ ಪುಟ್ಟಸ್ವಾಮಿ ಕ್ರೋಧದಿಂದ "ನಮ್ಮ ಮನೆತನದ ಮರ್ಯಾದೆಯನ್ನು ಎಲ್ಲರೆದುರು ಮಣ್ಣು ಮಾಡಿದೆ" ಎಂದು ಗೌರಿಯ ಮುಡಿಯನ್ನು ಹಿಡಿದು ಬಲ ಬಿಟ್ಟು ಎಳೆದ. ಜಯರಾಮುವಿನ ರಕ್ತ ಸಿಕ್ತ ದೇಹವನ್ನು ಉಡದಂತೆ ಅಪ್ಪಿಕೊಂಡಿದ್ದ ಗೌರಿಯ ದೇಹ ಹಾಗೆಯೇ ನಿಮಿರಿ ನಿಂತಿತ್ತು"[7] ಈ ಕಥೆಯಲ್ಲಿ ಜಯರಾಮು–ಗೌರಿಯರ ಮದುವೆ ಮುರಿದು ಬೀಳಲು ಅಂತಸ್ತು ಕಾರಣವಾಗುತ್ತದೆ. ಏಕೆಂದರೆ ಜಯರಾಮುವಿನ ಕುಟುಂಬದವರು ಗೌರಿಯ ಕುಟುಂಬದವರಷ್ಟು ಶ್ರೀಮಂತರಾಗಿರುವುದಿಲ್ಲ. ಜಯರಾಮುವಿಗೆ ನೌಕರಿ ದೊರೆತಿದ್ದರೆ ಆತನ ಪ್ರೀತಿ ಯಶಸ್ವಿಯಾಗುತ್ತಿತ್ತು. ನೌಕರಿಯ ಕಾರಣದಿಂದ

ಜಯರಾಮುವಿಗೆ ಹಿನ್ನಡೆಯಾಗುತ್ತದೆ. ಅಂದರೆ ಉದ್ಯೋಗ, ಹಣ, ಅಂತಸ್ತು, ಇಲ್ಲದೆ ಪ್ರೀತಿಯನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುವ ಗಟ್ಟಿ ಸಂದೇಶ ಕಥೆಯಲ್ಲಿದೆ. ಗರ್ಜನೆಗಿಂತ ಈ ಕಥೆ ಉತ್ತಮ ಪ್ರೇಮ ಕಥೆ. ಏಕೆಂದರೆ ಗರ್ಜನೆ ಕಥೆಯ ಒಂದು ಭಾಗವಾಗಿ ಪ್ರೇಮ ಪ್ರಕರಣವಿದೆ. ಆದರೆ ಈ ಕಥೆ ಪೂರ್ಣ ಪ್ರಮಾಣದಲ್ಲಿ ಪ್ರೇಮ ಕಥೆಯಾಗಿದೆ. ಗರ್ಜನೆಯ ಕಥಾ ನಾಯಕ ಮರಿನಂಜನದು ಏಕ ಮುಖ ಪ್ರೀತಿ. ಇಂತಹ ಏಕಮುಖ ಪ್ರೀತಿಯಿಂದ ಯಾವುದೇ ಪ್ರಯೋಜನವಿಲ್ಲ. ಹೇಳಿಕೊಳ್ಳದಿರುವ ಪ್ರೀತಿ ಉಸಿರಿಗಿಂತಲೂ ಭಾರ.

"ಕಥೆಯೊಳಗೆ ಬರುವ ಮಾಸ್ತಿಕಲ್ಲು ಹೆಣ್ಣಿನ ತ್ಯಾಗದ ಸಂಕೇತವಾಗಿದೆ. ತನ್ನ ಇಚ್ಛೆಗೆ ವಿರುದ್ಧವಾಗಿ ಶಂಕರನೊಂದಿಗೆ ಮದುವೆ ನಿಶ್ಚಯವಾದಾಗ ಗೌರಿ ವಿಹ್ವಲವಾಗದೇ ಇರುವುದಿಲ್ಲ. ರಕ್ತದ ಮಡುವಿನಲ್ಲಿ ಪ್ರಿಯಕರ ಜಯರಾಮನ ರಕ್ತಸಿಕ್ತ ದೇಹ ನೋಡಿದೊಡನೆ ಆಕೆ ತನ್ನೆಲ್ಲ ಸಮಸ್ಯೆಗಳಿಗೆ ತನ್ನ ಸಾವೇ ಪರಿಹಾರವೆಂದು ನಿರ್ಧಾರಕ್ಕೆ ಬರುತ್ತಾಳಲ್ಲದೆ ಸಾವನ್ನಪ್ಪಿಕೊಳ್ಳುತ್ತಾಳೆ."[8] ಈ ಅಮರ ಪ್ರೇಮ ಕಥೆಯನ್ನು ರಾಮಣ್ಣ ಅವರು ಮನಕಲಕುವಂತೆ ಚಿತ್ರಿಸಿದ್ದಾರೆ. ಈ ಮೂಲಕ ಸಾಮಾಜಿಕ ಕಟ್ಟುಪಾಡುಗಳಿಗಿಂತ ಪವಿತ್ರ ಪ್ರೇಮವೇ ಶ್ರೇಷ್ಠವೆಂಬುದನ್ನು ರಾಮಣ್ಣ ಅವರು ಕಥೆಯಲ್ಲಿ ಪ್ರತಿಪಾದಿಸಿದ್ದಾರೆ.

'ಬೇಲ' ಕನ್ನಡ ಕಥಾ ಸಾಹಿತ್ಯದಲ್ಲಿ ಮಾತ್ರವಲ್ಲದೇ ಇಡೀ ಭಾರತೀಯ ಸಾಹಿತ್ಯದಲ್ಲಿಯೇ ಅತ್ಯುತ್ತಮ ಪ್ರೇಮ ಕಥೆಗಳಲ್ಲೊಂದು. ಇದೊಂದು ಅಸಲಿ ಕಥನ. ಆ ಕಾರಣದಿಂದ ಓದುಗರ, ಸಹೃದಯರ ಗಮನ ಸೆಳೆದ ಕಥೆ. ಬೆಸಗರಹಳ್ಳಿ ರಾಮಣ್ಣ ಅವರು ತಮ್ಮ ಅನುಭವದ ಹಿನ್ನೆಲೆಯಿಂದ ಬರೆದ ಕಾರಣದಿಂದ ಬೇಲ ಆಸಕ್ತಿದಾಯಕ. 'ಒಂದು ಹುಡುಗನಿಗೆ ಬಿದ್ದ ಕನಸು' ಕಥಾ ಸಂಕಲನದಲ್ಲಿ ಬೇಲ ಕಥೆಯನ್ನು ರಚಿಸಿದ ಸಂದರ್ಭವನ್ನು ಹೀಗೆ ವಿವರಿಸುತ್ತಾರೆ: "ನಾನು ಈ ಕಥೆಯನ್ನು 1974ರಲ್ಲಿ ಬಿಹಾರ ರಾಜ್ಯದಲ್ಲಿ ಸಿಡುಬು ರೋಗ ನಿರ್ಮೂಲನಕ್ಕಾಗಿ ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯಕ್ರಮದಲ್ಲಿ ಭಾಗವಹಿಸಲು ಹೋಗಿದ್ದಾಗ ದೊರೆತ ಅನುಭವದಿಂದ ಬರೆದಿದ್ದು. ಭಾಗಲ್‌ಪುರ ಜಿಲ್ಲೆಯ ಪಿರ್‌ಪಾಂತಿ ಬ್ಲಾಕಿನ ಬಿಸಾಲ್ ಗ್ರಾಮದಲ್ಲಿ ಪರಿಚಯವಾದ ಗ್ರಾಮದ ನರ್ತಕಿ ಓರ್ವಳ ಸ್ನೇಹಫಲ ಈ ಕಥೆ. ನಾನು ಕಥೆಯನ್ನು ಸಮರ್ಥಿಸಿಕೊಳ್ಳುತ್ತಿಲ್ಲ ಅಥವಾ ಉತ್ತಮ ಕಥೆಯೆಂಬ ಭ್ರಮೆಯೂ ನನಗಿಲ್ಲ. ಆದರೆ ಜನರ ಹೃದಯವನ್ನು ತಲುಪುವುದರಲ್ಲಿ ಕಥೆ ನಿಸ್ಸಂದೇಹವಾಗಿ ಸಫಲತೆಯನ್ನು ಪಡೆಯಿತು."[9] ಆಕಸ್ಮಿಕ ಸಂದರ್ಭವೊಂದರಲ್ಲಿ ನಿರೂಪಕರಿಗೆ ಬೇಲಳ ಮನೆಯಲ್ಲಿ ಉಳಿಯುವ ಸಂದರ್ಭ ಒದಗಿ ಬರುತ್ತದೆ. ಆ ಸಂದರ್ಭದಲ್ಲಿ ಆಕೆಯ ಬದುಕಿನ ವೃತ್ತಾಂತವನ್ನು ತಿಳಿಯುತ್ತಾರೆ. ಆಕೆಗೆ ವೇಶ್ಯೆಯಾಗಲು ಕಾರಣವನ್ನು

ತಿಳೀದು ಮಮ್ಮಲ ಮರುಗುತ್ತಾರೆ. ಆಕೆಯ ಒಳ್ಳೆಯ ಸ್ನೇಹಿತರಾಗುತ್ತಾರೆ. ಆಕೆ ವೇಶ್ಯೆಯೆಂದು ತಿಳಿದಿದ್ದರೂ ಆಕೆಯನ್ನು ಮನಸಾರೆ ಪ್ರೀತಿಸುತ್ತಾರೆ. ಬೇಲಳಿಗೆ ನಿರೂಪಕರಿಗೆ ಮದುವೆಯಾಗಿರುವ ವಿಚಾರ ತಿಳಿದಾಗಲೂ ನಿರೂಪಕರ ಮೇಲೆ ಯಾವುದೇ ರೀತಿಯ ಕೋಪ ಮಾಡಿಕೊಳ್ಳುವುದಿಲ್ಲ. ಬಿಹಾರದಲ್ಲಿ ಸಿಡುಬು ರೋಗ ನಿರ್ಮೂಲನೆಯಾದ ನಂತರ ನಿರೂಪಕರು ಮತ್ತೆ ಕರ್ನಾಟಕ್ಕೆ ವಾಪಸ್ಸು ಬರುತ್ತಾರೆ. ಕರ್ನಾಟಕಕ್ಕೆ ಬಂದ ನಂತರವೂ ಬೇಲ ನಿರೂಪಕರನ್ನು ಅತಿಶಯವಾಗಿ ಕಾಡುತ್ತಾಳೆ. ಬೇಲ ನೀಡಿದ ಕಾಣಿಕೆಗಳನ್ನು ನೋಡಿ ದುಃಖಿಸುತ್ತಾರೆ. "ಬೇಲ ಬಹುಮಾನವಾಗಿ ಕೊಟ್ಟಿದ್ದ ಪುಟ್ಟ ಸುಂದರ ಪೆಟ್ಟಿಗೆಯ ಬೀಗವನ್ನು ತೆಗೆದೆ. ಅದರಲ್ಲಿ ತನ್ನ ಮೈಮೇಲೆ ಕಲೆಯ ಬಲೆಯನ್ನು ಹರಡಿಕೊಂಡಿದ್ದ ಒಂದು ಕಂಚಿನ ಕುಂಕುಮದ ಭರಣಿಯಿತ್ತು. ಅದರ ಮುಚ್ಚಳವನ್ನು ಬಿಚ್ಚಿದೆ. ಕುಂಕುಮ ತುಂಬಿತ್ತು. ಕುಂಕುಮದ ಭರಣಿಯನ್ನು ನೋಡಿದಾಗಲೆಲ್ಲ ಅವಳ ನೆನಪಾಗುತ್ತದೆ."[10] ಅಂದರೆ ಈ ಕಥೆಯ ವಿಶೇಷತೆ ಎಂದರೆ ಇದೊಂದು ಅಸಲೀ ಕಥನ. ನಿರೂಪಕರು ಬೇಲಳ ವೃತ್ತಿಯನ್ನು ತಿಳಿದು ಆಕೆಯನ್ನು ಮನಸಾರೆ ಪ್ರೀತಿಸುತ್ತಾರೆ. ಬೇಲಳೂ ಸಹ ನಿರೂಪಕರಿಗೆ ವಿವಾಹವಾಗಿರುವ ವಿಚಾರ ತಿಳಿದು ನಿರೂಪಕರನ್ನು ನಯವಾಗಿ ತಿರಸ್ಕರಿಸುತ್ತಾಳೆ. ತನ್ನಿಂದ ಇನ್ನೊಂದು ಹೆಣ್ಣಿನ ಬಾಳು ಹಾಳಾಗಬಾರದೆಂಬ ಕಾರಣದಿಂದ. ಕನ್ನಡದ ಮುಖ್ಯ ಲೇಖಕರೊಬ್ಬರು ಇಂಗ್ಲೀಷ್ ಪ್ರಾಧ್ಯಾಪಕರು ಆದ ಜಿ. ಕೆ. ಗೋವಿಂದರಾವ್ ಅವರು ಈ ಕಥೆ ನಾನು ಓದಿದ ಅತ್ಯುತ್ತಮ ಪ್ರೇಮ ಕಥೆಗಳಲ್ಲೊಂದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೆ ಮೇಲ್ಕಂಡ ಮೂರೂ ಕಥೆಗಳು ಸಹ ಅತ್ಯುತ್ತಮ ಪ್ರೇಮ ಕಥೆಗಳು. ಮೂರೂ ಪ್ರೇಮ ಕಥೆಗಳೂ ವಿಫಲ ಪ್ರೇಮ ಕಥೆ ಗಳಾದರೂ ಬೇರೆ ಬೇರೆ ಕಾರಣಗಳಿಂದ ಶ್ರೇಷ್ಠ ಕಥೆಗಳಾಗಿವೆ. ಗರ್ಜನೆ ನನ್ನನ್ನು ಬಹುವಾಗಿ ಕಾಡಿದ ಕಥೆ. ಏಕೆಂದರೆ ಮರಿನಂಜ ಪಾರ್ವತಿಯ ಸೌಂದರ್ಯ ನೋಡಿ ಆಕೆಯನ್ನು ವಿವಾಹವಾಗುವ ಕನಸು ಕಾಣುತ್ತಾನೆ. ಆದರೆ ಆತನ ಪರಿಸ್ಥಿತಿಯ ಕೈಗೊಂಬೆಯಾಗಿದ್ದಾನೆ. ಬೆಸಗರಹಳ್ಳಿ ರಾಮಣ್ಣ ಅವರು ತಮ್ಮ ಕಥೆಗಳ ರಚನೆಗೆ ಮಂಡ್ಯ ಜಿಲ್ಲೆಯ ಸ್ಥಳೀಯ ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಂಡಿದ್ದಾರೆ.

## ಕೊನೆ ಟಿಪ್ಪಣಿಗಳು:

1. ಕರೀಗೌಡ ಬೀಚನಹಳ್ಳಿ. (2019). ಶತಮಾನದ ಸಣ್ಣ ಕಥೆಗಳ ಸಮೀಕ್ಷೆ. ಪು.ಸಂ. 63
2. ಕರೀಗೌಡ ಬೀಚನಹಳ್ಳಿ. (2019). ಶತಮಾನದ ಸಣ್ಣ ಕಥೆಗಳ ಸಮೀಕ್ಷೆ. ಪು.ಸಂ. 70
3. ಬೆಸಗರಹಳ್ಳಿ ರಾಮಣ್ಣ. (2011). ಕಣಜ. ಪು.ಸಂ. 507
4. ಬೆಸಗರಹಳ್ಳಿ ರಾಮಣ್ಣ. (2011). ಕಣಜ. ಪು.ಸಂ. 33
5. ಬೆಸಗರಹಳ್ಳಿ ರಾಮಣ್ಣ. (2011). ಕಣಜ. ಪು.ಸಂ. 134
6. ಬೆಸಗರಹಳ್ಳಿ ರಾಮಣ್ಣ. (2011). ಕಣಜ. ಪು.ಸಂ. 502
7. ಬೆಸಗರಹಳ್ಳಿ ರಾಮಣ್ಣ. (2011). ಕಣಜ. ಪು.ಸಂ. 237
8. ಬೆಸಗರಹಳ್ಳಿ ರಾಮಣ್ಣ. (2011). ಕಣಜ. ಪು.ಸಂ. 566
9. ಬೆಸಗರಹಳ್ಳಿ ರಾಮಣ್ಣ. (2011). ಕಣಜ. ಪು.ಸಂ. 509
10. ಬೆಸಗರಹಳ್ಳಿ ರಾಮಣ್ಣ. (2011). ಕಣಜ. ಪು.ಸಂ. 293

## ಆಕರ ಗ್ರಂಥ:

1. ಬೆಸಗರಹಳ್ಳಿ ರಾಮಣ್ಣ. (2011). ಕಣಜ. ಲೋಹಿಯಾ ಪ್ರಕಾಶನ. ಬಳ್ಳಾರಿ.

## ಪರಾಮರ್ಶನ ಗ್ರಂಥಗಳು:

1. ಕರೀಗೌಡ ಬೀಚನಹಳ್ಳಿ. (2019). ಶತಮಾನದ ಸಣ್ಣ ಕಥೆಗಳ ಸಮೀಕ್ಷೆ. ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.
2. ಕೇಶವ ರೆಡ್ಡಿ ಹಂದ್ರಾಳ. (2012). ಡಾ. ಬೆಸಗರಹಳ್ಳಿ ರಾಮಣ್ಣ. ಸಾಹಿತ್ಯ ಅಕಡೆಮಿ. ನವದೆಹಲಿ.